

## ನಟರಾಜ್ ಹುಳಿಯಾರ್

ಕವಿ, ಕತೆಗಾರ, ವಿಮರ್ಶಕ, ಅಂಕಣಕಾರ, ನಾಟಕಕಾರ. 'ಮತ್ತೊಬ್ಬ ಸರ್ವಾಧಿಕಾರಿ', 'ಮಾಯಾ ಕಿನ್ನರಿ', 'ಬಸವಲಿಂಗಪ್ಪನವರು ಮತ್ತು ಡೇವಿಡ್ ಸಾಹೇಬರು' (ಕಥಾಸಂಗ್ರಹಗಳು), 'ಗಾಳಿ ಬೆಳಕು' (ಅಂಕಣ), 'ಶೇಕ್‌ಸ್ಪಿಯರ್ ಮನೆಗೆ ಬಂದ' (ನಾಟಕ), 'ರೂಪಕಗಳ ಸಾವು' (ಕವಿತೆ), 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' (ಸಂಶೋಧನೆ), 'ಇಂತಿ ನಮಸ್ಕಾರಗಳು' (ಸಾಂಸ್ಕೃತಿಕ ಕಥಾನಕ) ಅವರ ಕೆಲವು ಪುಸ್ತಕಗಳು. ಇತ್ತೀಚೆಗೆ ಅವರ ಕಾದಂಬರಿ 'ಕಾಮನ ಹುಣ್ಣಿಮೆ', 'ಪ್ರಜಾವಾಣಿ' ಅಂಕಣ ಬರಹಗಳ ಪುಸ್ತಕ 'ಕನ್ನಡಿ' ಪ್ರಕಟಗೊಂಡಿವೆ. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಗಾಂಧೀ ಅಧ್ಯಯನ ಕೇಂದ್ರದ ನಿರ್ದೇಶಕರು.

ಅವನ ಹೆಗಲನ್ನು ಅಲಂಕರಿಸಿದ್ದನ್ನು ಗಮನಿಸುತ್ತಾ ರಾಜಣ್ಣ ಬಾಗಿಲು ನೂಕಿದ. 'ಯಾರೂ' ಎಂದು ತೇಲಿಬಂದ ಅವ್ವನ ರಾಗದ ಕೂಗಿಗೆ 'ನಾವೇ ಪ್ಯಾಟೇ ಆಫೀಸರ್ರು' ಎಂದು ಸಲಿಗೆಯಲ್ಲಿ ಭೋಪರಾಕು ಹಾಕಿಕೊಂಡು ಒಳನುಗ್ಗಿದವನ ಕೆನ್ನೆ ಹಿಂಡಿ ಅವ್ವ ನಟಿಕೆ ಮುರಿದಳು. 'ಸುಂದರಾಂಗ ಬಂದ' ಅನ್ನುತ್ತಾ ಕೋಣೆಯಿಂದ ಹಾರಿಬಂದ ದೇವೀರಿ ಅಣಕಿಸಿಕೊಂಡಿತು. ಕಿಟ್‌ಬ್ಯಾಗನ್ನು ನೇತುಬಿಟ್ಟು ಗೋಡೆಗೊರಗಿ ಕೂತ. ಅವ್ವ ಇವನ ಮುಖವನ್ನೇ ಕಣ್ಣಲ್ಲಿ ತುಂಬಿಕೊಂಡು ಕೂತಳು. ಕಂತುವ ಮಂದ ಬೆಳಕಲ್ಲಿ ಅವ್ವನ್ನ ನೋಡಿದ. 'ಇದ್ಯಾಕವ್ವ ಹಿಂಗೆ ಸೊರಗಿದೀಯ' ಅಂದ. 'ಯೇ ಗುಂಡು ಕಲ್ಲಿದ್ದ ಹಂಗಿದಿನಿ, ನಂಗೇನು ಬಡುದೈತೆ' ಅಂದಳು. 'ಇಲ್ಲ, ತಗೀ' ಅಂದ. 'ನಿನ್ ಕಣ್ಣಿಗೆ ಹಂಗೆ ಕಾಣುತ್ತೆ' ಅಂದಳು. 'ಟಾನೀಕು ಗೀನೀಕು ತಗಳವ್ವ' ಅಂದ. ಅವ್ವ ಸಪ್ಪಗೆ ನಕ್ಕಳು.

ಬತ್ತಿದ ಅವ್ವನ ನಗೆಯನ್ನು ನೋಡುತ್ತ ಚಾಪೆಯ ತುಂಬ ಮೈಹಾಸಿಕೊಂಡ ರಾಜಣ್ಣನ ಬೆರಳು ವಾಡೆಗೆ ತಗಲಿ ಗಾಳಿ ತುಂಬಿದ ವಾಡೆ ಟಕಟಕಗುಟ್ಟಿತು. ಎದೇಲಿ ತಮಟೆ ಬಾರಿಸಿ ಎದ್ದು ಕೂತ. ಸದಾ ರಾಗಿ ತುಂಬಿಕೊಂಡು ಮೀಸಲಂತೆ ಮಡಗಿಬಿಡುತ್ತಿದ್ದ ಮೂಲೆಯ ವಾಡೆಯೂ ಫೈಸಲಾಗಿ ಹೊಗಿತ್ತು. ಖಾಲಿ ವಾಡೆಗೊರಗಿದ್ದ ಅವ್ವನಿಗೆ 'ಟಾನೀಕು ತೆಗೆದುಕೊ' ಎಂದು ಕರೆ ಕೊಟ್ಟಿದ್ದರ ವ್ಯಂಗ್ಯ ರಾಜಣ್ಣನಿಗೆ ಈಗ ಚುಚ್ಚಿ, ಮಾತು ಮರೆಸಲು 'ಅವ್ವ, ಯಾಕೆ ಹಬ್ಬುಕ್ಕೆ ಮನೇನ ಬಳುದಂಗಿಲ್ಲ' ಅಂದ. ಅವ್ವ, ದೇವೀರಿ ಮುಖ ನೋಡಿದಳು, ದೇವೀರಿ ಅವ್ವನ ಮುಖ ನೋಡಿದಳು. 'ಸೂತುಕ ಗೀತುಕವಾ' ಅಂದ. ಅವ್ವ ನಿಟ್ಟುಸಿರು ಬಿಟ್ಟು 'ಊಂ, ಸೂತುಕ, ಊರೊಕ್ಕಲು ಮಳಿಲ್ಲದೆ ಸತ್ತು' ಅಂದಳು. 'ಹಂಗಂದರೆ?' ಅಂದ, ಇದರ ತಲೆಬಾಲ ತಿಳಿಯದೆ. 'ಹಂಗಂದರೇ... ಊರೊಕ್ಕಲು ಯಾರೂವೇ ಹಬ್ಬಾವ ಮಾಡುತಾ ಇಲ್ಲ... ಅಂತದ್ದರಲ್ಲಿ ಊರಗೌಡರ ಮನೇಲಿ